# ಮಲ್ಲಿಗೆ! ಅಲ್ಲಿಂದಿಲ್ಲಿಗೆ...





ಎಸ್. ನಾರಾಯಣ್ ನಿರ್ದೇಶನದ 'ಮನಸು ಮಲ್ಲಿಗೆ' ಚಿತ್ರಮಂದಿರಗಳ ಹೊಸ್ತಿಲಲ್ಲಿದೆ. ಮರಾಠಿಯ 'ಸೈರಾಟ್' ಚಿತ್ರದ ಕನ್ನಡ ಅವತರಣಿಕೆ ಎನ್ನುವುದು ಈ ಚಿತ್ರದ ವಿಶೇಷ.

'ಸೈರಾಟ್' ಕಳೆದ ವರ್ಷ ಮರಾಠಿ ಚಿತ್ರರಂಗದಲ್ಲಿ ಸಂಚಲನೆ ಹುಟ್ಟಿಸಿದ ಸಿನಿಮಾ. ಪ್ರೇಮಕಥನದ ಈ ಕಲಾಕೃತಿ ಜಾತಿ–ಧರ್ಮಗಳ ಕುರಿತು ನೋಡುಗರನ್ನು ಯೋಚನೆಗೆ ಹಚ್ಚಿತ್ತು. ಈ ಚಿತ್ರದ ನಿರ್ದೇಶಕ ನಾಗರಾಜ್ ಮಂಜುಳೆ 'ಫಂಡ್ರಿ' ಎನ್ನುವ ಪ್ರಯೋಗಶೀಲ ಸಿನಿಮಾದ ಮೂಲಕ ತಮ್ಮ ಕಸುಬುದಾರಿಕೆಯನ್ನು ಸಾಬೀತುಪಡಿಸಿದವರು. ಕಮರ್ಷಿಯಲ್ ನೆಲೆಗಟ್ಟಿನಲ್ಲೂ ಗೆಲ್ಲುವ ಚಿತ್ರವನ್ನು ಮಾಡಬೇಕೆನ್ನುವ ಅವರ ಹಂಬಲದ ಅಭಿವ್ಯಕ್ತಿಯೇ 'ಸೈರಾಟ್'. ವ್ಯಾಪಾರಿ ರಂಜನೆಯ ಜೊತೆಗೆ ಸೃಜನಶೀಲ ನಿರ್ದೇಶಕನೊಬ್ಬನ ತುಡಿತದ ರೂಪದಲ್ಲೂ ಈ ಸಿನಿಮಾ ಮುಖ್ಯವೆನ್ನಿಸುತ್ತದೆ. ಮರಾಠಿಯ ಕಲಾಕೃತಿ ಕನ್ನಡದಲ್ಲಿ ಹೇಗೆ ಮೂಡಿರಬಹುದು ಎನ್ನುವ ಕುತೂಹಲ ಚಿತ್ರರಸಿಕರದು.

ನೆರೆಹೊರೆ ಭಾಷೆಗಳಲ್ಲಿ ಗೆದ್ದ ಸಿನಿಮಾಗಳನ್ನು ರೀಮೇಕ್ ಮಾಡುವ ಕನ್ನಡ ನಿರ್ದೇಶಕರಲ್ಲಿ ನಾರಾಯಣ್ ಮುಂಚೂಣಿಯಲ್ಲಿ ಇರುವವರು. ಇತ್ತೀಚಿನ ವರ್ಷಗಳಲ್ಲಿ ಸೋಲಿನ ಮೇಲೆ ಸೋಲು ಕಂಡು ಕಂಗೆಟ್ಟಿರುವ ನಾರಾಯಣ್ 'ಸೈರಾಟ್' ಮೂಲಕ ಮತ್ತೆ ಗೆಲುವಿನ ಫಾರ್ಮ್ ಕಂಡುಕೊಳ್ಳುವ ಹುಮ್ಮಸ್ಸಿನಲ್ಲಿದ್ದಾರೆ. ಕಡ ತಂದಿರುವ ಮಲ್ಲಿಗೆ ಅವರ ಕೈ ಹಿಡಿಯುತ್ತದೆಯೇ ಎನ್ನುವ ನಿರೀಕ್ಷೆ–ಕುತೂಹಲ ಗಾಂಧಿನಗರದ್ದು.

'ಸೈರಾಟ್' ಚಿತ್ರದ ನಾಯಕಿ ರಿಂಕಿ ರಾಜಗುರು ನಾರಾಯಣ್ ಕನ್ನಡದ ಚಿತ್ರಕ್ಕೂ ತಂದಿದ್ದಾರೆ. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಬೇಸಿಗೆ ರಜೆ ಶುರುವಾಗುತ್ತಿರುವ ಸಂದರ್ಭದಲ್ಲಿ 'ಮನಸು ಮಲ್ಲಿಗೆ' ತೆರೆ ಕಾಣುತ್ತಿದೆ.

# ರಾಮು ಮತ್ತು ರಾಜಕುಮಾರ!





ಕನ್ನಡದ ಯುವ ನಿರ್ದೇಶಕರಲ್ಲಿ ಸಂತೋಷ್ ಆನಂದರಾಮ್ ಅವರದು ಪ್ರಮುಖ ಹೆಸರು. 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ಮೂಲಕ ಚೊಚ್ಚಿಲ ಚಿತ್ರದಲ್ಲೇ ಬಹುದೊಡ್ಡ ಯಶಸ್ಸನ್ನು ಕಂಡ ಕೀರ್ತಿ ಅವರದು. ಪುಟ್ಟಣ್ಣನವರ 'ನಾಗರಹಾವು' ಚಿತ್ರದ ಕಥನವನ್ನು ನೆನಪಿಸುತ್ತ, ಈ ಕಾಲದ ಪ್ರೇಮಕಥೆಯೊಂದನ್ನು ಸಂತೋಷ್ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದರು. ಈಗ ಅವರ ನಿರ್ದೇಶನದ ಎರಡನೇ ಸಿನಿಮಾ 'ರಾಜಕುಮಾರ' ತೆರೆ ಕಾಣುತ್ತಿದೆ (ಮಾರ್ಚ್ 24).

'ರಾಮಾಚಾರಿ' ಚಿತ್ರದ ಹಿಂದೆ 'ನಾಗರಹಾವು' ನೆರಳಿದ್ದರೆ, 'ರಾಜಕುಮಾರ'ನ ಹಿಂದೆ 'ಕಸ್ತೂರಿ ನಿವಾಸ'ದ ಪ್ರೇರಣೆ ಇರುವಂತಿದೆ. ಚಿತ್ರದ ಪೋಸ್ಟರ್‌ಗಳಲ್ಲಿ ಪುನೀತ್ ಕಾಣಿಸಿಕೊಂಡಿರುವ ಭಾವ–ಭಂಗಿ 'ಕಸ್ತೂರಿ ನಿವಾಸ'ದ ರಾಜಕುಮಾರ್ ಅವರನ್ನು ನೆನಪಿಸುವಂತಿದೆ. ಹಳೆಯ ಚಿತ್ರದ 'ಗೊಂಬೆ ಹಾಡು' ಹೊಸ ರೂಪದಲ್ಲಿ ಮರುಕಳಿಸಿದೆ.

ಜೊತೆಗೆ, 'ರಾಜಕುಮಾರ' ಎನ್ನುವ ಶೀರ್ಷಿಕೆಯೇ ಚಿತ್ರಕ್ಕೆ ವಿಶೇಷ ಆಕರ್ಷಣೆ ತಂದುಕೊಟ್ಟಿದೆ. ರಾಜಕುಮಾರ್‌ಗೂ 'ರಾಜಕುಮಾರ'ನಿಗೂ ಸಂಬಂಧವಿಲ್ಲ ಎನ್ನುವುದು ಸಂತೋಷ್‌ರ ಸ್ಪಷ್ಟನೆ. ಆದರೆ, ರಾಜಕುಮಾರ್ ಪ್ರತಿಪಾದಿಸಿದ ಮೌಲ್ಯಗಳು ಹಾಗೂ 'ಕಸ್ತೂರಿ ನಿವಾಸ' ಸಿನಿಮಾದ ತಾತ್ವಿಕತೆಯನ್ನು 'ರಾಜಕುಮಾರ' ಚಿತ್ರದಲ್ಲಿ ಕಾಣಬಹುದಂತೆ. 'ಸಿನಿಮಾ ಎನ್ನುವುದು ವ್ಯಾಪಾರ' ಎಂದು ಯುವ ನಿರ್ದೇಶಕರು ಎಗ್ಗಿಲ್ಲದೆ ಹೇಳುತ್ತಿರುವ ಸಂದರ್ಭದಲ್ಲಿ, ಮೌಲ್ಯಗಳ ಕುರಿತು ಸಂತೋಷ್ ಮಾತನಾಡುತ್ತಿರುವುದು ವಿಶೇಷವಾಗಿದೆ. ಈ ಚಿತ್ರಕ್ಕಾಗಿ ಅವರು ಕಲೆಹಾಕಿರುವ ತಾರಾಗಣ ಕೂಡ ಒಂದು ಕೂಡುಕುಟುಂಬದ ಆಲ್ಬಂ ನೆನಪಿಸುವಂತಿದೆ. ಪುನೀತ್ ರಾಜಕುಮಾರ್, ಪ್ರಿಯಾ ಆನಂದ್, ಅನಂತನಾಗ್, ಅಚ್ಯುತ ಕುಮಾರ್, ಶರತ್‌ಕುಮಾರ್, ಅಶೋಕ್ – ಈ ತಾರಾಗಣದ ಪಟ್ಟಿಯೇ ಸಿನಿಮಾಕ್ಕೆ ಪ್ರೇಕ್ಷಕರನ್ನು ಸೆಳೆಯುವ ಆಹ್ವಾನಪತ್ರಿಕೆಯಂತಿದೆ.

■ ರಘು